ಪಂಥಾಹ್ವಾನ - ಶಿವಕೋಟ್ಯಾಚಾರ್ಯ (೯ ನೇ ತರಗತಿ ಪ್ರಥಮ ಭಾಷೆ ಕನ್ನಡ )

ಹೊಸಗನ್ನಡ ರೂಪ

– ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ದಕ್ಷಿಣದೇಶದಲ್ಲಿ ಬೊಟ್ಟನ್ನು ಹೋಲುವಂತಿರುವ(ಶ್ರೇಷ್ಠವಾದ) ಆಭೀರವೆಂಬ ನಾಡು ಇದೆ. ಅಲ್ಲಿ ವರ್ಣೆ ಎಂಬ ನದಿಯ ತೀರದಲ್ಲಿ ವೇಣಾತಟ ಎಂಬ ಪಟ್ಟಣವಿದೆ. ಅದು ಪಟ್ಟಣದ ಗುಣಗಳಿಂದ ಅತ್ಯಂತ ರಮಣೀಯವಾದುದು, ಇಂದ್ರಲೋಕವನ್ನೇ ಹೋಲುವುದು. ಅದನ್ನು ಜಿತಶತ್ರು ಎಂಬ ಅರಸನು ಆಳುತ್ತಿದ್ದನು. ಅವನಿಗೆ ವಿಜಯಮತಿ ಎಂಬ ರಾಣಿಯಿದ್ದಳು. ಆ ಇಬ್ಬರಿಗೆ ನಾನು ಮಗನಾಗಿರುವೆನು, ವಿದ್ಯುಚ್ಚೋರನೆಂಬವನಾಗಿರುವೆನು. ಆ ಪಟ್ಟಣದಲ್ಲಿ ಯಮಪಾಶನೆಂಬ ನಗರರಕ್ಷಕ (ತಳಾರ)ನಿದ್ದನು. ಅವನ ಹೆಂಡತಿ ನಿಗುಣದೇವತೆ ಎಂಬವಳು. ಆ ಇಬ್ಬರಿಗೂ ಯಮದಂಡನೆಂಬ ಈತನು ಮಗನು. ನಾವಿಬ್ಬರೂ ಸಮಾನ ವಯಸ್ಸಿನವರಾಗಿದ್ದೇವೆ. ನಮಗಿಬ್ಬರಿಗೂ ಐದು ಆರು ವರ್ಷ ಪ್ರಾಯವಾದಾಗ ಜೈನಸದ್ಗ*ಹಸ್ಥನಾದ ಸಿದ್ಧಾರ್ಥನೆಂಬ ಉಪಾಧ್ಯಾಯನ ಬಳಿಯಲ್ಲಿ ಇಬ್ಬರನ್ನೂ ವಿದ್ಯಾಭ್ಯಾಸಕ್ಕೆ ಇಟ್ಟರು. ಏಳೆಂಟು ವರ್ಷದೊಳಗಾಗಿ ನಾವಿಬ್ಬರೂ ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಸಾಮುದ್ರಕ, ವಾತ್ಸ್ಯಾಯನ, ಶಾಲಿಹೋತ್ರ, ಪಾಲಕಾಪ್ಯ, ಚಾಣಕ್ಯ, ವೈದ್ಯ – ಮೊದಲಾಗಿ ಉಳ್ಳ ಶಾಸ್ತ್ರಗಳೆಲ್ಲವನ್ನೂ ಕಲಿತೆವು. ಆಮೇಲೆ, ಇವನು ತಳಾರನ ಮಗನಾದುದರಿಂದ ತನಗೆ ಯೋಗ್ಯವಾದ ಕಳ್ಳರನ್ನು ಕಂಡುಹಿಡಿವ ಕ್ರಮವನ್ನು ಹೇಳತಕ್ಕ 'ಸುರಖ* ಎಂಬ ವಿದ್ಯೆಯನ್ನು ಕಲಿತನು. ನಾನು ಕಳವು ಮಾಡುವ ಉಪಾಯವನ್ನು ತಿಳಿಸುವ ಕರಪಟಶಾಸ್ತ್ರವನ್ನು ಕಲಿತೆನು. ಹೀಗೆ ನಮ್ಮೊಳಗೆ ಪರಸ್ಪರ ಪ್ರೀತಿಯಿಂದ ಕಾಲ ಕಳೆಯುತ್ತಿತ್ತು. ಒಂದು ದಿವಸ ನಾವಿಬ್ಬರೂ ಕಾಡಿನಲ್ಲಿ ಆಟವಾಡಲೆಂದು 'ಇಂದ್ರೋಪಮ' ಎಂಬ ಕಾಡಿಗೆ ಹೋದೆವು. ಅಲ್ಲಿ ಅಶೋಕ, ಪುನ್ನಾಗ, ರಂಜೆ, ತಿಲಕ, ಹೊಂಗೆ, ಸಂಪಗೆ, ಅಡಕೆಮರ, ತೆಂಗಿನಮರ, ಖರ್ಜೂರ, ಜಂಬು, ನಿಂಬೆ, ಹಲಸು,ದಾಳಿಂಬೆ, ಬಾಳೆ, ದ್ರಾಕ್ಷೆ, ಮಾವು – ಮುಂತಾಗಿರತಕ್ಕ ಹಲವು ಬಗೆಯ ಮರಗಳ ಜಾತಿಗಳಿಂದ ಒತ್ತೊತ್ತಾಗಿರುವ ನಂದನದ ಉದ್ಯಾನದಲ್ಲಿ ಇಬ್ಬರೂ ಉಳಿಚೆಂಟಾಟವನ್ನು ಆಡುತ್ತಿದ್ದೆವು. ಈತನು ಅದೃಶ್ಯವಾಗತಕ್ಕ ವಿದ್ಯೆಯನ್ನು ಕಲಿತವನಾದುದರಿಂದ ಎಲ್ಲಿದ್ದರೂ ಕಾಣದ ರೀತಿಯಲ್ಲಿರಲು ಈತನನ್ನು ಬಹಳವಾಗಿ

ಹುಡುಕಿದೆನು. ಆದರೂ ಕಾಣದೆ ದಿಕ್ಕುಕಾಣದೆ ಬೇಸರಗೊಂಡು ಹೀಗೆ ಹೇಳಿದೆನು – "ಮಗನೇ, ನೀನು ಪಟ್ಟಣದ ಕಾವಲುಗಾರನಾದಾಗ ನಗರ ನಿನ್ನ ರಕ್ಷಣೆಯಲ್ಲಿದ್ದಾಗಲೇ ನಾನು ಕದ್ದು ನಿನ್ನನ್ನು ಕೊಲ್ಲಿಸದಿದ್ದರೆ ಪಂಥವೇನು?* ಎಂದು ನಾನು ಹೇಳಿದಾಗ ಈತನು "ಮಗನೇ, ನಾನು ತಳಾರ ಕೆಲಸ ಮಾಡುವಾಗ ನೀನು ಕದ್ದರೆ ನಿನ್ನನ್ನು ಹಿಡಿದು ಮುರಿಯುವ ಹಾಗೆ ಕಟ್ಟಿ ಕಳ್ಳರಿಗೆ ವಿಸತಕ್ಕ ಶಿಕ್ಷೆಯಿಂದ ದಂಡಿಸದಿದ್ದರೆ ಏನಾಯ್ತು?* ಎಂದು ಹೇಳಿದನು. 'ಈ ಶಪಥದ ಮಾತನ್ನು ಮರೆಯಬೇಡ' ಎಂದು ನಾವು ಒಬ್ಬರೊಬ್ಬರನ್ನು ಮೂದಲಿಸಿ ಪ್ರತಿಜ್ಞೆ ಮಾಡಿದೆವು. ಕೆಲವು ಕಾಲದ ನಂತರ ನನ್ನ ತಂದೆ ನನಗೆ ರಾಜ್ಯಾಕಾರವನ್ನು ಕೊಟ್ಟು ಶ್ರುತಸಾಗರರೆಂಬ ಋಷಿಗಳ ಬಳಿಯಲ್ಲಿ ತಪಸ್ಸನ್ನು ಕೈಗೊಂಡನು. ಈ ಯಮದಂಡನ ತಂದೆಯೂ ತನ್ನ ವಂಶಕ್ರಮದಿಂದ ಬಂದ ತಳವಾರಿಕೆಯನ್ನು ಇವನಿಗೆ ಕೊಟ್ಟು ರಾಜನೊಡನೆ ತಪಸ್ಸನ್ನು ಸ್ವೀಕರಿಸಿದನು. ಆಮೇಲೆ ನಾನು ಅರಸನಾಗಿ ರಾಜ್ಯವಾಳುತ್ತಿದ್ದಾಗ ಈತನು ಆ ಪಟ್ಟಣದಲ್ಲಿ ತಳವಾರ ಕೆಲಸವನ್ನು ಮಾಡುತ್ತಿದ್ದನು. ಹೀಗೆಯೇ ಇಬ್ಬರಿಗೂ ಸುಖದಲ್ಲಿ ಕಾಲ ಕಳೆಯುತ್ತಿತ್ತು. ಅನಂತರ ಒಂದು ದಿವಸ ಈತನು ತನ್ನ ಮನಸ್ಸಿನಲ್ಲಿ ಈ ರೀತಿಯಾಗಿ

ಯೋಚಿಸಿದನು – "ನನ್ನ ರಾಜನು ಕಳ್ಳನಾಗಿರುವನು. ನಾನು ಈ ಪಟ್ಟಣದಲ್ಲಿ ಕಾವಲುಗಾರಿಕೆ ಮಾಡುತ್ತಿದ್ದೇನೆ. ಈ ಕೆಲಸ ಒಳ್ಳೆಯದಲ್ಲ" ಎಂದು ನನಗೆ ಹೆದರಿ ನಾಡನ್ನು ತ್ಯಜಿಸಿ ಬಂದು ನಿಮ್ಮ ಸೇವಕನಾದನು. ನಾನು ಇವನನ್ನು ನಾನಾಳುವ ನಾಡಿನ ಎಂಟೂ ದಿಕ್ಕುಗಳಲ್ಲಿರುವ ಗ್ರಾಮ – ನಗರ – ಖೇಡ – ಖರ್ವಡ – ಮಡಂಬ – ಪಟ್ಟಣ – ದ್ರೋಣಾಮುಖ – ಎಂಬ ಭೂಭಾಗಗಳಲ್ಲಿ ವಿಚಾರಿಸಿಯೂ ಕಾಣಲು ಸಿಗಲಿಲ್ಲ. ಅನ್ಯರ ರಾಜ್ಯಗಳಲ್ಲಿ ವಿಚಾರಿಸಿಯೂ ಕಾಣಸಿಗಲಿಲ್ಲ. ಆದುದರಿಂದ ಇಲ್ಲಿ ಹುಡುಕಿಸುವುದಕ್ಕಾಗಿ ಇಲ್ಲಿಗೆ ಚಾರಕರನ್ನು ಕಳುಹಿಸಿದೆನು. ಅವರು ಹುಡುಕಿ ಕಂಡು ಬಂದು ನನಗೆ ಹೀಗೆ ಹೇಳಿದರು – "ದೇವಾ, ಮಿಥಿಳೆ ಎಂಬ ಪಟ್ಟಣವಿದೆ. ಅದನ್ನು ವಾಮರಥನೆಂಬ ರಾಜನು ಆಳುತ್ತಿದ್ದಾನೆ.

ಯಮದಂಡನು ಅಲ್ಲಿಗೆ ಹೋಗಿ ಅವನ ಸೇವಕನಾಗಿ ಪಟ್ಟಣದ ರಕ್ಷಣೆಯ ಕೆಲಸವನ್ನು ಪಡೆದು ತಳವಾರನಾಗಿ ಸುಖದಿಂದ ಇದ್ದಾನೆ" – ಎಂದು ಚಾರಕರು ಹೇಳಲು, ಆ ಮಾತನ್ನು ನಾನು ಕೇಳಿ 'ಮೀಥಿಳೆಯೆಂಬ ಪಟ್ಟಣಕ್ಕೆ ನಾನು ಯಾರೊಬ್ಬರೂ ತಿಳಿಯದ ಹಾಗೆ ಹೋಗಿ ಯಮದಂಡನನ್ನು ಕೂಡಿಕೊಂಡು ಬರುತ್ತೇನೆ' ಎಂದು ಪುರುಷೋತ್ತಮನೆಂಬ ಮಂತ್ರಿಗೆ ಹೇಳಿದೆನು. ಆ ಮೇಲೆ ವಜ್ರಸೇನನೆಂಬ ಹೆಗ್ಗಡೆಯನ್ನು ಕರೆಯಿಸಿ, 'ನಾನು ಒಂದು ಗೃಹಕೃತ್ಯದ ಸಂಬಂಧದಲ್ಲಿ ಹೋಗಿ ಬರುತ್ತೇನೆ. ನಾನು ಬರುವವರೆಗೆ ರಾಜ್ಯಪಾಲನೆ ಮಾಡುತ್ತಿರು' ಎಂದು ಹೇಳಿ ಎಲ್ಲ ರಾಜ್ಯಭಾರವನ್ನೂ ಅವನಿಗೆ ಒಪ್ಪಿಸಿಕೊಟ್ಟು ನಡುವಿರುಳಿನಲ್ಲಿ ಬಟ್ಟೆಯನ್ನು ಹರಿದು ಉಟ್ಟುಕೊಂಡು, ಆಮೇಲೆ ಯಾರೊಬ್ಬರೂ ತಿಳಿಯದ ರೀತಿಯಲ್ಲಿ ಒಬ್ಬನೆ ಹೊರಟುಬಂದು, ಈ ಪಟ್ಟಣವನ್ನು ಪ್ರವೇಶಿಸಿದೆನು. ಇಲ್ಲಿ ನನ್ನ ಪ್ರತಿಜ್ಞೆಯೇ ಕಾರಣವಾಗಿ ದ್ರವ್ಯವನ್ನು ಕಳವು ಮಾಡಿ, ಈ ಯಮದಂಡನನ್ನು ಕೊಲ್ಲಿಸುವ ಹಾಗೆ ಮಾಡಿದ್ದೇನೆ. ಇದೇ ನಾನು ಕಳ್ಳತನ ಮಾಡಲು ಕಾರಣ. ಈತನು ನನಗೆ ಈ ರೀತಿಯಲ್ಲಿ ಮಿತ್ರನಾಗಿದ್ದಾನೆ". ಎಂದು ವಿದ್ಯುಚ್ಚೋರನು – ಹೇಳಿದನು.

ಆಮೇಲೆ, ಒಂಟೆಯನ್ನೇರಿಕೊಂಡು ಬರುವ ದೂತರಿಬ್ಬರು ಪತ್ರವನ್ನು ತೆಗೆದುಕೊಂಡು ಬಂದು ಅರಸನ ಮನೆಯ ಬಾಗಿಲಲ್ಲಿ ನಿಂದು ತಮಗೆ ರಾಜನನ್ನು ಕಾಣಬೇಕಾಗಿದೆಯೆಂದು ದ್ವಾರಪಾಲಕನಿಗೆ ತಿಳಿಸಿದರು. ದ್ವಾರಪಾಲನು ಇದನ್ನು ರಾಜನಿಗೆ ಹೇಳಲು, ರಾಜನು ಅನುಮತಿಯಿತ್ತನು. ಅದರಂತೆ ದೂತರು ಅರಮನೆಯನ್ನು ಹೊಕ್ಕು ಆಸ್ಥಾನಮಂಟಪದಲ್ಲಿದ್ದ ವಿದ್ಯುಚ್ಚೋರನನ್ನು ಕಂಡು ಸಾಷ್ಟಾಂಗವಂದನೆ ಮಾಡಿ, ಆತನ ಮುಂದೆ ಪತ್ರನ್ನು ಇಟ್ಟರು. ಆಗ ರಾಜನ ಅಕಾರಿ (ಮಂತ್ರಿ) ಯೊಬ್ಬನು ಪತ್ರವನ್ನು ತೆಗೆದುಕೊಂಡು ರಾಜನ ಮುಂದೆ ಈ ರೀತಿಯಾಗಿ ಓದಿದನು – "ವಿದ್ಯುಚ್ಚೋರ ಮಹಾರಾಜರಿಗೆ ಮಂತ್ರಿಯಾದ ಪುರುಷೋತ್ತಮನೂ ಹೆಗ್ಗಡೆಯಾದ ವಜ್ರಸೇನನೂ ಸಾಷ್ಟಾಂಗವಂದನೆ ಮಾಡಿ ಕಾರ್ಯವನ್ನು ವಿಜ್ಞಾಪಿಸುವರು – ತಾವು ಹೋಗಿ ಹಲವು ದಿವಸವಾಯಿತು. ಹಿಂದಿನ ಗೃಹಕೃತ್ಯವನ್ನು ಮರೆತಿದ್ದೀರಿ. ತಾವು ಇಲ್ಲದೆ, ರಾಜ್ಯಪರಿಪಾಲನೆ ಮಾಡುವವರು ಯಾರೂ ಇಲ್ಲ. ಈ ಪತ್ರವನ್ನು ಕಂಡ ಕೂಡಲೇ ತಡವಿಲ್ಲದೆ ಹೊರಟು ಬೇಗನೆ ಬರಬೇಕು". ಹೀಗೆ ಓದಿದುದನ್ನು ವಾಮರಥನು ಕೇಳಿ 'ಮೊದಲು ಈತನು ಹೇಳಿದುದೂ ಪತ್ರದ ಮಾತೂ ಒಂದೇ ಆಯಿತು' ಎಂದು ಸಂಶಯವಿಲ್ಲದೆ ಆಗ ವಿಶ್ವಾಸಪಟ್ಟನು. ಈತನು ತನ್ನ ಸಾಮಂತರಾಜನು ಎಂದು ತಿಳಿದು ಸಿಂಹಾಸನದಂತೆಯೇ ಇರತಕ್ಕ ಪೀಠವನ್ನು ಇಡಲು ಹೇಳಿ ಇರಿಸಿದನು.

ಸಂಗ್ರಹ_ಕಣಜ ಅಂತರ್ಜಾಲ http://kanaja.in/archives/10245

mamatabhagwat1@gmail.com